2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು,
ವಿಜಯಪೂರ ಇವರ ನ್ಯಾಯಾಲಯ

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.17/2020
ಪಿ.ಡಬ್ಲೂ.24
ಸಿ.ಡಬ್ಲೂ.26

| | | |
|---|---|---|
| ಸಾಕ್ಷಿದಾರರ ಹೆಸರು | : | ಅನಂಥ ಬಿರಾದಾರ |
| ತಂದೆಯ ಹೆಸರು | : | ಶ್ರೀಶೈಲ |
| ವಯಸ್ಸು | : | 28 ವರ್ಷ. |
| ಉದ್ಯೋಗ | : | ಚಾಲಕ. |
| ವಾಸಸ್ಥಳ | : | ಕೆಂಗಲಗುತ್ತಿ. |

ಇಂದು ದಿನಾಂಕ 07-01-2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

1) ನಾನು 2014 ರಿಂದ 2022 ರವರೆಗೆ ಬಡೆಗಾರ ಪೆಟ್ರೋಲ್ ಪಂಪನಲ್ಲಿ ಮ್ಯಾನೇಜರ್ ಅಂತಾ ಕೆಲಸ ಮಾಡುತ್ತಿದ್ದೆ.

2) ಚಾಸಾ-27 ಕೂಡ ನನಗೆ ಪರಿಚಯ ಇದ್ದಾರೆ. ಅವರು ಸದರಿ ಪೆಟ್ರೋಲ್ ಪಂಪದಲ್ಲಿ ಕೆಲಸ ಮಾಡುತ್ತಿದ್ದರು. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ 4 ಮತ್ತು ಗೈರು ಹಾಜರು ಉಳಿದಿರುವ 6 ನೇ ಆರೋಪಿ ಬಗ್ಗೆ ಕೇಳಲಾಗಿ ಗೊತ್ತಿಲ್ಲ ಅಂತಾ ನುಡಿದಿರುತ್ತಾರೆ. 4 ಮತ್ತು 6 ನೇ ಆರೋಪಿತರು ಎರಡು ನೀರಿನ ಬಾಟಲಿಗಳಲ್ಲಿ ನಾಲ್ಕು ಲೀಟರ ಪೆಟ್ರೊಲನ್ನು ಖರೀದಿಸಿಕೊಂಡು ಹೋದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಪೆಟ್ರೊಲನ್ನು ಯಾವ ಉದ್ದೇಶಕ್ಕಾಗಿ ಉಪಯೋಗಿಸಿದ್ದರು ಅಂತಾ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ದಾಖಲು ಮಾಡಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತಾನು ನೀಡಿದ ಹೇಳಿಕೆ ವಿರುದ್ದವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ:

1) ನನಗೆ 4 ಮತ್ತು 6 ನೇ ಆರೋಪಿತರ ಪರಿಚಯ ಇದೆ, ಅವರು ದಿಃ 30.12.2019 ರಂದು ಮದ್ಯಾಹ್ನ ಸಮಯದಲ್ಲಿ ನಾನು ಕೆಲಸ ಮಾಡುತ್ತಿದ್ದ ಪೆಟ್ರೋಲ್ ಪಂಪಗೆ ಬಂದು ಎರಡು ಲೀಟರನ ಎರಡು ನೀರಿನ ಖಾಲಿ ಬಾಟಲಿಗಳಲ್ಲಿ ನಾಲ್ಕು ಲೀಟರ ಪೆಟ್ರೋಲನ್ನು ತುಂಬಿಸಿಕೊಂಡು ಹೋಗಿದ್ದರು ಅಂದರೆ ಸರಿಯಲ್ಲ. ನಾನು ಅವರನ್ನು ನೋಡಿದ್ದೇನೆ ಅಂದರೆ ಸರಿಯಲ್ಲ. ದಿಃ 17.06.2020 ರಂದು ಪೊಲೀಸ್ ಠಾಣೆಗೆ ನನ್ನನ್ನು ಕರೆಯಿಸಿದ್ದರು, ಅಲ್ಲಿ ತಮ್ಮ ವಶದಲ್ಲಿದ್ದ 4 ಮತ್ತು 6 ನೇ ಆರೋಪಿತರನ್ನು ತೋರಿಸಿದ್ದರು, ನಾನು ಅವರನ್ನು ಗುರುತಿಸಿ ದಿಃ 30.12.2019 ರಂದು ಪೆಟ್ರೋಲ್ ಖರೀದಿಸಿಕೊಂಡ ಹೋದ ಬಗ್ಗ ಪೊಲೀಸರಿಗೆ ಹೇಳಿಕೆ ನೀಡಿದ್ದ ಅಂದರೆ ಸರಿಯಲ್ಲ. ಈ ಬಗ್ಗ ನಾನು ಪೊಲೀಸರ ಮುಂದೆ ದಿಃ 17.06.2020 ರಂದು ಈಗ ಓದಿ ಹೇಳಿದಂತೆ "ನನ್ನ ಖುದ್ದು ಊರು---------------ಗೊತ್ತಾಯಿತು" ಅಂತಾ ಹೇಳಿಕೆ ನೀಡಿದ್ದ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-67 ಅಂತಾ ಗುರುತಿಸಲಾಯಿತು.

2) 4 ಮತ್ತು 6 ನೇ ಆರೋಪಿತರು ನಾನು ಕೆಲಸ ಮಾಡುತ್ತಿದ್ದ ಪೆಟ್ರೋಲ್ ಪಂಪನಿಂದ ಪೆಟ್ರೋಲ್ ಖರೀದಿಸಿಕೊಂಡು ಹೋಗಿದ್ದರೂ ಸಹ, ನಿಪಿ-67 ರಂತೆ ಹೇಳಿಕೆ ನೀಡಿದ್ದರೂ ಸಹ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿಃ ಇರುವುದಿಲ್ಲ ಅಂತಾ ಹೇಳಿರುತ್ತಾರೆ.
ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.
07/01/2025

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ವ ವಿಶೇಷ ನ್ಯಾಯಾಧೀಶರು,
ವಿಜಯಪೂರ ಇವರ ನ್ಯಾಯಾಲಯ

ಸ್ಪೇಷಲ್ ಕೇಸ್ ಎಸ್.ಸಿ./ಎಸ್.ಟಿ.ನಂ.17/2020
ಪಿ.ಡಬ್ಲೂ.25
ಸಿ.ಡಬ್ಲೂ.27

| | | |
|---|---|---|
| ಸಾಕ್ಷಿದಾರರ ಹೆಸರು | : | ರವಿ ಮೇಲಗಡೆ |
| ತಂದೆಯ ಹೆಸರು | : | ಅರ್ಜುನ |
| ವಯಸ್ಸು | : | 32 ವರ್ಷ. |
| ಉದ್ಯೋಗ | : | ಚಾಲಕ. |
| ವಾಸಸ್ಥಳ | : | ಕಂಬಾಗಿ. |

ಇಂದು ದಿನಾಂಕ 07-01-2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

1) ನಾನು 2016 ರಿಂದ 2022 ರವರೆಗೆ ಬಡೆಗಾರ ಪೆಟ್ರೋಲ್ ಪಂಪನಲ್ಲಿ ವರ್ಕರ್ ಅಂತಾ ಕೆಲಸ ಮಾಡುತ್ತಿದ್ದೆ.

2) ಚಾಸಾ-26 ಕೂಡ ನನಗೆ ಪರಿಚಯ ಇದ್ದಾರೆ. ಅವರು ಸದರಿ ಪೆಟ್ರೋಲ್ ಪಂಪದಲ್ಲಿ ಕೆಲಸ ಮಾಡುತ್ತಿದ್ದರು. ಸಾಕ್ಷಿಗೆ ನ್ಯಾಯಾಲಯದ ಮುಂದೆ ಇರುವ 4 ಮತ್ತು ಗೈರು ಹಾಜರು ಉಳಿದಿರುವ 6 ನೇ ಆರೋಪಿ ಬಗ್ಗೆ ಕೇಳಲಾಗಿ ಗೊತ್ತಿಲ್ಲ ಅಂತಾ ನುಡಿದಿರುತ್ತಾರೆ. 4 ಮತ್ತು 6 ನೇ ಆರೋಪಿತರು ಎರಡು ನೀರಿನ ಬಾಟಲಿಗಳಲ್ಲಿ ನಾಲ್ಕು ಲೀಟರ ಪೆಟ್ರೊಲನ್ನು ಖರೀದಿಸಿಕೊಂಡು ಹೋದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಪೆಟ್ರೊಲನ್ನು ಯಾವ ಉದ್ದೇಶಕ್ಕಾಗಿ ಉಪಯೋಗಿಸಿದ್ದರು ಅಂತಾ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ದಾಖಲು ಮಾಡಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತಾನು ನೀಡಿದ ಹೇಳಿಕೆ ವಿರುದ್ಧವಾಗಿ ಸಾಕ್ಷ್ಯವನ್ನು ನೀಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸರಕಾರಿ ಅಭಿಯೋಜಕರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ:

1) ನನಗೆ 4 ಮತ್ತು 6 ನೇ ಆರೋಪಿತರ ಪರಿಚಯ ಇದೆ, ಅವರು ದಿಃ 30.12.2019 ರಂದು ಮದ್ಯಾಹ್ನ ಸಮಯದಲ್ಲಿ ನಾನು ಕೆಲಸ ಮಾಡುತ್ತಿದ್ದ ಪೆಟ್ರೋಲ್ ಪಂಪಗೆ ಬಂದು ಎರಡು ಲೀಟರನ ಎರಡು ನೀರಿನ ಖಾಲಿ ಬಾಟಲಿಗಳಲ್ಲಿ ನಾಲ್ಕು ಲೀಟರ ಪೆಟ್ರೋಲನ್ನು ತುಂಬಿಸಿಕೊಂಡು ಹೋಗಿದ್ದರು ಅಂದರೆ ಸರಿಯಲ್ಲ. ನಾನು ಅವರನ್ನು ನೋಡಿದ್ದೇನೆ ಅಂದರೆ ಸರಿಯಲ್ಲ. ದಿಃ 17.06.2020 ರಂದು ಪೊಲೀಸ್ ಠಾಣೆಗೆ ನನ್ನನ್ನು ಕರೆಯಿಸಿದ್ದರು, ಅಲ್ಲಿ ತಮ್ಮ ವಶದಲ್ಲಿದ್ದ 4 ಮತ್ತು 6 ನೇ ಆರೋಪಿತರನ್ನು ತೊರಿಸಿದ್ದರು, ನಾನು ಅವರನ್ನು ಗುರುತಿಸಿ ದಿಃ 30.12.2019 ರಂದು ಪೆಟ್ರೋಲ್ ಖರೀದಿಸಿಕೊಂಡ ಹೋದ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿದ್ದ ಅಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ದಿಃ 17.06.2020 ರಂದು ಈಗ ಓದಿ ಹೇಳಿದಂತೆ "ನನ್ನ ಖುದ್ದು ಊರು---------------ಗೊತ್ತಾಯಿತು" ಅಂತಾ ಹೇಳಿಕೆ ನೀಡಿದ್ದೆ ಅಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-68 ಅಂತಾ ಗುರುತಿಸಲಾಯಿತು.

2) 4 ಮತ್ತು 6 ನೇ ಆರೋಪಿತರು ನಾನು ಕೆಲಸ ಮಾಡುತ್ತಿದ್ದ ಪೆಟ್ರೋಲ್ ಪಂಪನಿಂದ ಪೆಟ್ರೋಲ್ ಖರೀದಿಸಿಕೊಂಡು ಹೋಗಿದ್ದರೂ ಸಹ, ನಿಪಿ-68 ರಂತೆ ಹೇಳಿಕೆ ನೀಡಿದ್ದರೂ ಸಹ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರವಾಗಿಃ ಇರುವುದಿಲ್ಲ ಅಂತಾ ಹೇಳಿರುತ್ತಾರೆ.
ಮರುವಿಚಾರಣೆಃ ಇರುವುದಿಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

(ಸತೀಶ ಎಲ್.ಪಿ.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪೂರ.
07/01/2025